ಓ .ಎಸ್ ನಂಃ 60/2015
ಡಿಡ ಬ್ಲ್ಯೂಃ 2
ದಿನಾಂಕಃ 29.08.2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಎನ್ ಎಸ್ ವಕೀಲರಿಂದಃ

ಈ ದಿನ ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಹೇಳಿ ಬರೆಸಿದ್ದು ಅದರಲ್ಲಿ ಬರೆದಿರುವ ಸಂಗತಿಗಳು ಸತ್ಯವಾಗಿವೆ ಮತ್ತು ಅದಕ್ಕೆ ನನ್ನ ರುಜುವನ್ನು ಹಾಕಿದ್ದೇನೆ. ನಿಡಿ 1 ಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ನಿಡಿ 1 ವಿಲ್ ಪತ್ರವಾಗಿದ್ದು ಅದನ್ನು ಚಿಕ್ಕ ತಿಪ್ಪಾರೆಡ್ಡಿಯವರು ಸರ್ವೆನಂಬರ್ 10 ಕ್ಕೆ ಸಂಬಂಧ ಪಟ್ಟಂತೆ ವಸಂತ್ ರೆಡ್ಡಿ, ಶಂಕರ್ ರೆಡ್ಡಿ ಮತ್ತು ಬಾಬು ರೆಡ್ಡಿ ಹೆಸರಿಗೆ ಮಾಡಿದ್ದು ನನ್ನ ಜೊತೆ ಸಾಕ್ಷಿಯಾಗಿ ಚಂಗಲ್ ರಾಯ ರೆಡ್ಡಿ ಸಹಿ ಮಾಡಿರುತ್ತಾರೆ . ನನ್ನ ಮತ್ತು ಚಂಗಲ್ ರೆಡ್ಡಿಯವರ ಸಹಿಗಳನ್ನು ನಿಡಿ 1 ಎ ಮತ್ತು ಬಿ ಎಂದು , ಚಿಕ್ಕ ತಿಪ್ಪಾರೆಡ್ಡಿಯವರು ನಿಡಿ 1 ಕ್ಕೆ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು ಅದನ್ನು ನಾನು ನೋಡಿರುತ್ತೇನೆ. ಸದರಿಯವರ 2 ಹೆಬ್ಬೆಟ್ಟಿನ ಗುರುತುಗಳನ್ನು ನಿಡಿ 1 ಸಿ ಮತ್ತು ಡಿ ಎಂದು ಗುರುತಿಸಲಾಯಿತು. ಸದರಿ ಪತ್ರವನ್ನು ರಾಮಕೃಷ್ಣಪ್ಪ ಎನ್ನುವವರು ಬರೆದಿರುತ್ತಾರೆ ಅವರ ಸಹಿಯನ್ನು ಗುರುತಿಸುತ್ತೇನೆ. ಅದನ್ನು ನಿಡಿ 1 ಇ ಎಂದು ಗುರುತಿಸಲಾಯಿತು.
ಪಾಟೀ ಸವಾಲಿಗೆ ಸಮಯ ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

(ರಹೀಮ್ ಅಲಿ ಎಮ್ ನದಾಫ್ )
ಅಪರ ಹಿರಿಯ ಸಿ.ಜೆ ಮತ್ತು ಜೆಎಂಎಫ್ ಸಿ
ಕೆಜಿಎಫ್